# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1069** |
| 2 | ಸದಸ್ಯರ ಹೆಸರು | : | **ಶ್ರೀಮತಿ ಹೇಮಲತ ನಾಯಕ್**<br>**(ವಿಧಾನಸಭೆಯಿಂದ ಚುನಾಯಿತರಾದವರು)** |
| 3 | ಉತ್ತರಿಸಬೇಕಾದ ದಿನಾಂಕ | : | **25.07.2024** |
| 4 | ಉತ್ತರಿಸುವ ಸಚಿವರು | : | **ಗೃಹ ಸಚಿವರು** |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯ ಪೊಲೀಸ್ ಇಲಾಖೆಯಲ್ಲಿ ಮಂಜೂರಾಗಿರುವ ಡಿಎಸ್‌ಪಿ ಹುದ್ದೆಗಳೆಷ್ಟು; ಅದರಲ್ಲಿ ನೇರ ನೇಮಕಾತಿ ಮತ್ತು ಬಡ್ತಿಗೆ ಮೀಸಲಿಟ್ಟಿರುವ ಹುದ್ದೆಗಳೆಷ್ಟು : (ವಿವರ ನೀಡುವುದು)</td><td>ರಾಜ್ಯ ಪೊಲೀಸ್ ಇಲಾಖೆಯಲ್ಲಿ ಡಿವೈಎಸ್‌ಪಿ(ಸಿವಿಲ್) ವೃಂದದ ಹುದ್ದೆಗಳ ವಿವರ ಈ ಕೆಳಗಿನಂತೆ ಇರುತ್ತದೆ:-
<table>
<tr><th>ಮಂಜೂರಾಗಿರುವ ಒಟ್ಟು ಹುದ್ದೆಗಳ ಸಂಖ್ಯೆ</th><th>ಬಡ್ತಿಗೆ ಮೀಸಲಿಟ್ಟಿರುವ ಹುದ್ದೆಗಳ ಸಂಖ್ಯೆ</th><th>ನೇರ ನೇಮಕಾತಿಗೆ ಮೀಸಲಿಟ್ಟಿರುವ ಹುದ್ದೆಗಳ ಸಂಖ್ಯೆ</th></tr>
<tr><td>435</td><td>348</td><td>87</td></tr>
</table></td></tr>
<tr><td>(ಆ)</td><td>ಸದರಿ ಡಿಎಸ್‌ಪಿ ಹಂತದ ಅಧಿಕಾರಿಗಳನ್ನು ಇತರೆ ಇಲಾಖೆಗಳಿಗೆ ನಿಯೋಜನೆ/ ವರ್ಗಾವಣೆ ಮಾಡಲಾಗಿದೆಯೇ : (ವಿವರ ನೀಡುವುದು)</td><td>ವಿವರಗಳನ್ನು ಅನುಬಂಧ – ಎ ರಲ್ಲಿ ಒದಗಿಸಲಾಗಿದೆ.</td></tr>
<tr><td>(ಇ)</td><td>ಕಳೆದ ಐದು ವರ್ಷಗಳಲ್ಲಿ ಡಿಎಸ್‌ಪಿ ಹುದ್ದೆಗೆ ಎಷ್ಟು ಸಲ ಬಡ್ತಿ ನೀಡಲಾಗಿದೆ: (ವಿವರ ನೀಡುವುದು.)</td><td>ಕಳೆದ ಐದು ವರ್ಷಗಳಲ್ಲಿ ಡಿಎಸ್‌ಪಿ ಹುದ್ದೆಗೆ 08 ಬಾರಿ ಮುಂಬಡ್ತಿ ನೀಡಿದೆ. ವಿವರ ಈ ಕೆಳಗಿನಂತೆ ಇರುತ್ತದೆ:-<br>1. ಸರ್ಕಾರದ ಆದೇಶ ಸಂಖ್ಯೆ: ಒಇ/110/ ಪಿಇಜಿ/20149, ದಿ: 12.02.2020.<br>2. ಸರ್ಕಾರದ ಆದೇಶ ಸಂಖ್ಯೆ: ಒಇ/49/ ಪಿಇಜಿ(i)/2021, ದಿ: 06.08.2021.<br>3. ಸರ್ಕಾರದ ಆದೇಶ ಸಂಖ್ಯೆ: ಒಇ/79/ ಪಿಇಜಿ/2021, ದಿ: 08.03.2022.<br>4. ಸರ್ಕಾರದ ಆದೇಶ ಸಂಖ್ಯೆ: ಒಇ/16/ ಪಿಇಜಿ/2022, ದಿ: 05.07.2022.<br>5. ಸರ್ಕಾರದ ಆದೇಶ ಸಂಖ್ಯೆ: ಒಇ/116/ ಪಿಇಜಿ/2022, ದಿ: 11.08.2022.<br>6. ಸರ್ಕಾರದ ಆದೇಶ ಸಂಖ್ಯೆ: ಒಇ/85/ ಪಿಇಜಿ/2023(1), ದಿ: 27.03.2023 ಮತ್ತು 28.03.2023.<br>7. ಸರ್ಕಾರದ ಆದೇಶ ಸಂಖ್ಯೆ: ಒಇ/13/ ಪಿಇಜಿ/2024, ದಿ: 07.03.2024.<br>8. ಸರ್ಕಾರದ ಆದೇಶ ಸಂಖ್ಯೆ: ಒಇ/13/ ಪಿಇಜಿ/2024, ದಿ: 29.05.2024. (ಪ್ರತಿಗಳನ್ನು ಲಗತ್ತಿಸಿದೆ)</td></tr>
</table>

..2...

| | | |
|---|---|---|
| (ಈ) | ಡಿಎಸ್‌ಪಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳ ಜೇಷ್ಠತಾ ಪಟ್ಟಿ ತಯಾರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಡಿಎಸ್‌ಪಿ ಹುದ್ದೆಗೆ ಬಡ್ತಿ ಹೊಂದಿದ್ದರೂ ಅಧಿಕಾರಿಗಳ ಜೇಷ್ಠತಾ ಪಟ್ಟಿ ತಯಾರಿಸಲು ವಿಳಂಬ ಮಾಡುತ್ತಿರಲು ಇರುವ ಕಾರಣವೇನು? (ವಿವರ ನೀಡುವುದು) | ದಿನಾಂಕ: 01.01.2022ರಲ್ಲಿದ್ದಂತೆ ಡಿವೈಎಸ್‌ಪಿ (ಸಿವಿಲ್) ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ: 05.02.2022ರಲ್ಲಿ ಪ್ರಕಟಿಸಲಾಗಿರುತ್ತದೆ.<br><br>ಪಿ.ಎಸ್.ಐ. (ಸಿವಿಲ್) ವೃಂದದಲ್ಲಿ ನೇಮಕಾತಿಗೊಂಡ ಗ್ರಾಮೀಣ ಕೃಪಾಂಕ ರಹಿತ ಅಧಿಕಾರಿಗಳ ಜೇಷ್ಠತೆಯನ್ನು ಪರಿಷ್ಕರಿಸಿದ ಕಾರಣ ಹಾಗೂ ಪಿ.ಐ. (ಸಿವಿಲ್) ವೃಂದದಲ್ಲಿಯೂ ಸಹ ಜೇಷ್ಠತಾ ಪಟ್ಟಿ ಪರಿಷ್ಕರಣೆಯಾಗಿದ್ದು ನ್ಯಾಯಾಲಯಗಳು ನೀಡಿದ ಆದೇಶದ ಹಿನ್ನಲೆಯಲ್ಲಿ ಡಿವೈಎಸ್‌ಪಿ (ಸಿವಿಲ್) ವೃಂದಕ್ಕೆ ಮುಂಬಡ್ತಿ ಹೊಂದಿದ್ದ ಅಧಿಕಾರಿಗಳ ಜೇಷ್ಠತೆಯಲ್ಲಿ ಪರಿಷ್ಕರಣೆಗೊಂಡ ಕಾರಣ ಸರ್ಕಾರದ ಅಧಿಸೂಚನೆ ಸಂಖ್ಯೆ: ಒಇ 380 ಪೊಸಿಪ 2018 (1) ದಿನಾಂಕ 09.06.2020 ರಲ್ಲಿ 1) ಶ್ರೀ ಎಂ.ಸಿ. ಶಿವಕುಮಾರ್ 2) ಶ್ರೀ ಜೆ.ಜೆ. ತಿರುಮಲೇಶ್ 3) ಶ್ರೀ ಜೆ. ಮೋಹನ್ ಇವರುಗಳನ್ನು ಡಿವೈ.ಎಸ್.ಪಿ. (ಸಿವಿಲ್) ವೃಂದದಿಂದ ಪಿ.ಐ. (ಸಿವಿಲ್) ವೃಂದಕ್ಕೆ ಹಿಂಬಡ್ತಿಗೊಳಿಸಲಾಗಿರುತ್ತದೆ. ಈ ಆದೇಶದ ವಿರುದ್ಧ ಅರ್ಜಿದಾರರು ಕೆ.ಎ.ಟಿ ಅರ್ಜಿ ಸಂಖ್ಯೆ:1905 ರಿಂದ 1910/2020 ಅನ್ನು ದಾಖಲಿಸಿದ್ದು, ಈ ಕುರಿತು ಮಾನ್ಯ ಕೆ.ಎ.ಟಿಯು ದಿನಾಂಕ: 21.06.2023ರಂದು ನೀಡಿರುವ ಆದೇಶದಲ್ಲಿ ಸದರಿ ಅರ್ಜಿಯನ್ನು ವಜಾಗೊಳಿಸಿರುವ ಹಿನ್ನೆಲೆಯಲ್ಲಿ ಡಿವೈ.ಎಸ್.ಪಿ. (ಸಿವಿಲ್) ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಅನುವಾಗುವಂತೆ ಪರಿಷ್ಕೃತ ಕರಡು ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಸಲ್ಲಿಸುವಂತೆ ಸರ್ಕಾರದ ಪತ್ರ ಸಂಖ್ಯೆ:ಒಇ 17 ಪಿಇಜಿ 2022, ದಿನಾಂಕ:17.07.2023ರಲ್ಲಿ ಡಿಜಿ ಮತ್ತು ಐಜಿಪಿ ರವರನ್ನು ಕೋರಲಾಗಿರುತ್ತದೆ.<br><br>ಈ ಹಂತದಲ್ಲಿ ಸದರಿ ಅರ್ಜಿದಾರರು ಕೆ.ಎ.ಟಿ ಅರ್ಜಿ ಸಂಖ್ಯೆ:1905 ರಿಂದ 1910/2020 ರಲ್ಲಿ ಮಾನ್ಯ ಕೆ.ಎ.ಟಿಯು ದಿನಾಂಕ:21.06.2023ರಂದು ನೀಡಿರುವ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:13234/2023(ಎಸ್–ಕೆಎಟಿ) ಅನ್ನು ದಾಖಲಿಸಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:07–08–2023ರಂದು ನೀಡಿರುವ ಮಧ್ಯಂತರ ಆದೇಶದಲ್ಲಿ 1) ಶ್ರೀ ಎಂ.ಸಿ. ಶಿವಕುಮಾರ್ 2) ಶ್ರೀ ಜೆ.ಜೆ. ತಿರುಮಲೇಶ್ 3) ಶ್ರೀ ಜೆ. ಮೋಹನ್ ಇವರುಗಳನ್ನು ಡಿವೈ.ಎಸ್.ಪಿ. (ಸಿವಿಲ್) ವೃಂದದಿಂದ ಪಿ.ಐ. (ಸಿವಿಲ್) ವೃಂದಕ್ಕೆ ಹಿಂಬಡ್ತಿಗೊಳಿಸಲಾದ ಸರ್ಕಾರದ ಅಧಿಸೂಚನೆ ಸಂಖ್ಯೆ: ಒಇ 380 ಪೊಸಿಪ 2018 (1) ದಿನಾಂಕ 09.06.2020ಕ್ಕೆ ತಡೆಯಾಜ್ಞೆ ನೀಡಿರುತ್ತದೆ. ಮಾನ್ಯ ಉಚ್ಛ ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ಜೇಷ್ಠತಾ ಪಟ್ಟಿ ಸಿದ್ಧಪಡಿಸುವಲ್ಲಿ ವಿಳಂಬವಾಗುತ್ತಿದೆ. |

ಸಂಖ್ಯೆ: ಒಇ 232 ಪಿಇಜಿ 2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು

# ಅನುಬಂಧ-ಎ

## ಡಿವೈ.ಎಸ್.ಪಿ. (ಸಿವಿಲ್) ವೃಂದದ ನಿಯೋಜನಾ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ವಿವರ

| ಕ್ರ ಸಂ | ಇತರೆ ಇಲಾಖೆಗೆ / ನಿಯೋಜನೆ | ಇತರೆ ಇಲಾಖೆಗೆ ನಿಯೋಜನೆಯಲ್ಲಿರುವ ಅಧಿಕಾರಿಗಳ ಸಂಖ್ಯೆ | ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ವಿವರ (ಶ್ರೀಯುತರು) |
|---|---|---|---|
| 1 | ಬಿ.ಡಿ.ಎ, ಬೆಂಗಳೂರು | 02 | ಮಲ್ಲೇಶಯ್ಯ ಎಂ. ಮತ್ತು ಕೃಷ್ಣಕುಮಾರ್ ಯು.ಡಿ. |
| 2 | ಬಿ.ಎಂ.ಟಿ.ಎಫ್, ಬೆಂಗಳೂರು | 01 | ಶ್ರೀಧರ್ ಕೆ.ವಿ. |
| 3 | ರಾಜ್ಯ ಮಾನವ ಹಕ್ಕುಗಳ ಆಯೋಗ | 02 | ಮೋಹನ್ ಎಸ್.ವೈ. ಮತ್ತು ಸುಧೀರ್ ಎಂ. ಹೆಗಡೆ |
| 4 | ಸಿಬಿಐ | 01 | ಡಾ: ಕೆ.ಎಂ. ಸಂತೋಷ್ |
| 5 | ಎನ್.ಐ.ಎ. | 01 | ಸುಶೀಲ ಆರ್. |
| ಒಟ್ಟು | | **07** | |